ಊ) ೧೯೮೮-೮೯ರಲ್ಲಿ ಸರ್ಕಾರಕ್ಕೆ ಕಳಪೆ ರೋಗದ ಬಿತ್ತನೆ ಮೊಟ್ಟೆ ಸರಬರಾಜು ಮಾಡಿದ ಬಗ್ಗೆ ದೂರುಗಳು ಬಂದಿವೆಯೆ.

ಋ) ಸರ್ಕಾರ ರೋಗರಹಿತ ಬಿತ್ತನೆ ಮೊಟ್ಟೆ ಒದಗಿಸಲು ಕೈಗೊಂಡ ಕ್ರಮಗಳೇನು ?

ಶ್ರೀ ಕೃಷ್ಣ (ರೇಷ್ಮೆ ಮತ್ತು ಪಶುಸಂಗೋಪನಾ ಸಚಿವರು).—

ಅ) ಕರ್ನಾಟಕ ರಾಜ್ಯದಲ್ಲಿ ೩,೯೧,೧೦೦ ಎಕರೆ ಜಮೀನಿನಲ್ಲಿ ರೇಷ್ಮೆ ಬೆಳೆ ಇದೆ ಹಾಗೂ ರೇಷ್ಮೆ ಉತ್ಪಾದನೆ ಸುಮಾರು ೪೯೭೧ ಮೆಟ್ರಿಕ್ ಟನ್‌ಗಳು (೧೯೮೭-೮೮)

ಆ) ಸುಮಾರು ೨೦ ಕೋಟಿಗಳಷ್ಟು ಮೊಟ್ಟೆಯು ಒಂದು ವರ್ಷದಲ್ಲಿ ಬೇಕಾಗುವುದೆಂದು ಅಂದಾಜು ಮಾಡಲಾಗಿದೆ.

ಇ) ಒಂದು ವರ್ಷದಲ್ಲಿ ರೇಷ್ಮೆ ಉತ್ಪಾದನೆ.—

ಸರ್ಕಾರಿ ವಲಯದಲ್ಲಿ—೭೯ ಮೆ.ಟನ್‌ಗಳು

ಖಾಸಗಿ ವಲಯದಲ್ಲಿ —೪೮೯೧ ಮೆ.ಟನ್‌ಗಳು

ಈ) ಗ್ರೈನೇಜ್‌ಗಳನ್ನು ಸ್ಥಾಪಿಸುವ ಉದ್ದೇಶವಿರುವುದಿಲ್ಲ.

ಉ) ಬಂದಿರುವುದಿಲ್ಲ.

ಊ) ರೋಗರಹಿತ ಮೊಟ್ಟೆ ಒದಗಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

೧) ಬಿತ್ತನೆ ಪ್ರದೇಶಗಳಿಂದ ಉತ್ತಮ ಗುಣಮಟ್ಟದ ಬಿತ್ತನೆ ಗೂಡುಗಳನ್ನು ಬಿತ್ತನೆ ಕೋಠಿಗಳಿಗೆ ಒದಗಿಸುವುದು.

೨) ಬಿತ್ತನೆ ಕೋಠಿಗಳಲ್ಲಿ ಗಮನ ಕೊಟ್ಟು ಮೊಟ್ಟೆಗಳನ್ನು ತಯಾರಿಸುವುದು.

೩) ಪ್ರತಿ ಬಿತ್ತನೆ ಕೋಠಿಗಳಲ್ಲೂ ಚಿಟ್ಟೆಗಳನ್ನು ಬಹಳ ಎಚ್ಚರಿಕೆಯಿಂದ ಪರೀಕ್ಷೆ ಮಾಡಿ ಯಾವ ರೋಗವೂ ಕಾಣಿಸಿಕೊಳ್ಳದ ಮೊಟ್ಟೆಗಳನ್ನು ಮಾತ್ರ ವಿತರಣೆ ಮಾಡುವುದು.

೪) ಬಿತ್ತನೆ ಪ್ರದೇಶದಲ್ಲಿ ರೋಗಗಳು ಹರಡದಂತೆ ರೋಗ ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳುವುದು.

೫) ಖಾಸಗಿಯವರು ಮೊಟ್ಟೆ ತಯಾರಿಸಿ ವಿತರಣೆ ಮಾಡುವುದನ್ನು ಉಸ್ತುವಾರಿ ಮಾಡುವುದು

ಸಮಾಜ ಕಲ್ಯಾಣ ಹಾಗೂ ಇತರ ಇಲಾಖೆಗಳಲ್ಲಿ ಖರ್ಚಾದ ಹಣ

೨೮೬೩. ಶ್ರೀ ಜಿ. ಎಸ್. ಆಚಾರ್ (ಬೈಂದೂರು). —ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ (೧) ಸಮಾಜ ಕಲ್ಯಾಣ ಇಲಾಖೆ (೨) ಹಿಂದುಳಿದವರ ಕಲ್ಯಾಣ ಇಲಾಖೆ (೩) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಮೂಲಕ ೧೯೮೭-೮೮ನೇ ವರ್ಷದಲ್ಲಿ ವ್ಯಯಿಸಲು ಎಷ್ಟು ಹಣ ನಿಗದಿಗೊಳಿಸಲಾಗಿತ್ತು ಹಾಗೂ ಇದುವರೆವಿಗೂ ಆದ ವೆಚ್ಚವೆಷ್ಟು ?

ಆ) ಹಣ ಉಳಿಕೆಗೆ ಕಾರಣವೇನು ?

ಶ್ರೀ ಪಿ.ಜಿ ಆರ್. ಸಿಂಧ್ಯ (ಸಮಾಜ ಕಲ್ಯಾಣ ಸಚಿವರು).—

ಅ)(೧) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಗೆ.

೧೯೮೭-೮೮ರಲ್ಲಿ ವ್ಯಯಿಸಲು ಹಣ ನಿಗದಿ ಗೊಳಿಸಿದ್ದು – ರೂ. ೨೫೫೫.೪೩ ಲಕ್ಷ
ಇದುವರೆವಿಗೂ ಆದ ವೆಚ್ಚ – ರೂ. ೨೩೬೨.೫೪ ಲಕ್ಷ
ಉಳಿಕೆ ಹಣ – ರೂ. ೧೯೨.೮೯ ಲಕ್ಷ

(೨) ಸಮಾಜ ಕಲ್ಯಾಣ ಇಲಾಖೆಗೆ

೧೯೮೭-೮೮ನೇ ಸಾಲಿನಲ್ಲಿ ವ್ಯಯಿಸಲು ಹಣ ನಿಗದಿಗೊಳಿಸಿದ್ದು – ರೂ. ೨೯೧೮.೯೪ ಲಕ್ಷ

ಇದುವರೆವಿಗೂ ಆದ ವೆಚ್ಚ – ರೂ. ೨೮೪೨.೮೪ ಲಕ್ಷ

ಉಳಿಕೆ ಹಣ – ರೂ. ೭೧.೧೦ ಲಕ್ಷ.

ಅ) ಇಲಾಖಾ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಪೂರ್ಣವಾಗಿ ಹಾಜರಾಗದೆ ಇರುವುದರಿಂದ

ಸಾರಿಗೆ ಸಂಸ್ಥೆಯಲ್ಲಿ ನೇಮಕಾತಿ ಸಮಿತಿ.

೨೯೬೩. ಶ್ರೀ ಎಂ. ಶಿವಣ್ಣ(ಹೆಚ್. ಡಿ. ಕೋಟೆ).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಹುದೆ ಗಳನ್ನು ಭರ್ತಿ ಮಾಡಲು ಪ್ರತ್ಯೇಕ ನೇಮಕಾತಿ ಸಮಿತಿ ಇದೆಯೇ ?

ಆ) ಇಲ್ಲದಿದ್ದಲ್ಲಿ, ಈಗ ಯಾವ ರೀತಿಯಲ್ಲಿ ಭರ್ತಿ ಮಾಡಲಾಗುತ್ತಿದೆ ? (ವಿವರ ನೀಡುವುದು).

ಇ) ನೇಮಕಾತಿ ಸಮಿತಿ ರಚನೆ ಮಾಡುವ ಉದ್ದೇಶ ಸರಕಾರಕ್ಕೆ ಇದೆಯೆಂ ? ಇದ್ದಲ್ಲಿ ಯಾವ ರೀತಿಯ ರಚನೆ ಮಾಡಲಾಗುವುದು.

ಶ್ರೀ ಸಿದ್ಧರಾಮಯ್ಯ(ಸಾರಿಗೆ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ವಿವಿಧ ಶ್ರೇಣಿಯಲ್ಲಿ ಹುದ್ದೆಗಳನ್ನು ಭರ್ತಿ ಮಾಡಲು ಪ್ರತ್ಯೇಕ ನೇಮಕಾತಿ ಸಮಿತಿಗಳಿವೆ.

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಪದವೀಧರ ನೇಮಕಾತಿ ನಿಯಮಾವಳಿ ೧೯೮೨ರ ಪ್ರಕಾರ ನೇಮಕಾತಿಗಳನ್ನು ಮಾಡಿ ಕೊಳ್ಳುವ ವಿವರ.—

೧) ದರ್ಜೆ ೧ ಮತ್ತು ೨ನೇ ಶ್ರೇಣಿಯ ಅಧಿಕಾರಿಗಳ ನೇಮಕಾತಿಗಳು ಕೇಂದ್ರ ನೇಮಕಾತಿ ಸಮಿತಿಗಳಿಂದ ಮಾಡಲ್ಪಡುತ್ತದೆ. ಸಂಸ್ಥೆಯ ಅಧ್ಯಕ್ಷರು ೧ನೇ ಶ್ರೇಣಿಯ ಅಧಿಕಾರಿಗಳ ಆಯ್ಕೆಯ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ೨ನೇ ಶ್ರೇಣಿಯ ನೇಮಕಾತಿ ಸಮಿತಿ ಗಳಿಗೆ ಪ್ರಧಾನ ವ್ಯವಸ್ಥಾಪಕರು ಅಧ್ಯಕ್ಷರಾಗಿರುತ್ತಾರೆ.

ವಿಭಾಗ ಮಟ್ಟದಲ್ಲಿ ವಿಭಾಗ ನೇಮಕಾತಿ ಸಮಿತಿಗಳು ಮೂರನೇ ದರ್ಜೆಯ ಹುದ್ದೆ ಗಳನ್ನು ಭರ್ತಿ ಮಾಡುತ್ತವೆ. ಇದಕ್ಕೆ ವಿಭಾಗೀಯ ಮುಖ್ಯಸ್ಥರು ಅಧ್ಯಕ್ಷರಾಗಿರು ತ್ತಾರೆ.

೨) ಸರಕಾರದ ಮಟ್ಟದಲ್ಲಿ ಒಂದು ಕೇಂದ್ರೀಯ ನೇಮಕಾತಿ ಆಯೋಗವನ್ನು ರಚಿಸಲಂ ಪರಿಶೀಲಿಸಲಾಗುತ್ತಿದೆ.

ಬಸ್ ಮಾರ್ಗ ರಾಷ್ಟ್ರೀಕರಣಗೊಳಿಸುವ ಬಗ್ಗೆ.

೨೯೬೪. ಶ್ರೀ ಎಂ. ಶಿವಣ್ಣ(ಹೆಗ್ಗಡದೇವನ ಕೋಟೆ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ರಾಜ್ಯದಲ್ಲಿ ಬಸ್ ಸೌಲಭ್ಯ ಇಲ್ಲದಿರುವ ಗ್ರಾಮಗಳು ಎಷ್ಟು ಹಾಗೂ ಈ ಬಗ್ಗೆ ಸಮೀಕ್ಷೆ ಮಾಡಲಾಗಿದೆಯೇ ?

ಮಾಡಿದ್ದಲ್ಲಿ ಬಸ್ ಮಾರ್ಗ ಕಲ್ಪಿಸಲು ಯಾವಾಗ ಕ್ರಮ ಕೈಗೊಳ್ಳಲಾಗುವುದು ?